

# ಗೊಂದಲಗಳನ್ನುಂಟು ಮಾಡುವ ಅಪೋಲ್ಲುವೋನು



## ನುಡಿಯಲ್ಪಟ್ಟ ಪ್ರವಾದನೆ

ಇಗೋ ಜನರನ್ನು ವಂಚಿಸುವದಕ್ಕೂ ನನ್ನ ಮಹಿಮೆಗೆ ಸಮಾನವಾದಂತ ಮಹಿಮೆಯನ್ನಾಗಿ ತೋರಿಸುವದಕ್ಕೂ ಸೈತಾನನ ಮಹಿಮೆಯಲ್ಲಿ ತುಂಬಿದಂತ ಸೇವಕರನ್ನು ಎಬ್ಬಿಸುವದಕ್ಕೂ, ಕಪಟವಚಗಳಿಂದಲೂ ನನ್ನ ದೈವತ್ವಕ್ಕೆ ವಿರುದ್ಧವಾದ ಕಾರ್ಯಗಳಿಂದಲೂ ಜನರನ್ನು ಗೊಂದಲುಪಡಿಸುವದಕ್ಕೂ ಅಂತಿಕ್ರಿಸ್ತನ ಒಂದು ದುಷ್ಟ ಆತ್ಮವು ಕಾರ್ಯಮಾಡಲು ಹೊರಡುತ್ತದೆ. ಅದು ಮೊದಲು ಕಾರ್ಯಮಾಡಲು ನಿನ್ನ ದೇಶವನ್ನು ಗುರಿಮಾಡಿಕೊಂಡಿದೆ. ಅದು ಅತಿ ಬೇಗನೆ ನಿನ್ನ ದೇಶದ ಮೇಲೆ ಇಳಿದು ಬರುತ್ತದೆ. ಪ್ರಸಿದ್ಧಗೊಂಡಿರುವ ಮೂರು ಸೇವಕರ ಮೂಲಕ ಅದು ಕಾರ್ಯಮಾಡಲು ಕಾಯ್ದುಕೊಂಡಿದೆ. ಪ್ರಸಿದ್ಧಿಕೊಂಡಿರುವ ಈ ವ್ಯಕ್ತಿಗಳು ಜನರನ್ನು ತಮ್ಮ ಮಾತಿನಿಂದ ಸೆಳೆಯುವ ಶಕ್ತಿಯುಳ್ಳವರು. ಅವರ ಹೃದಯದ ಆಲೋಚನೆಗಳಲ್ಲಿ ವಿಷವನ್ನು ಸೇರಿಸುವದಕ್ಕೂ, ಅವರ ಮಾತನ್ನು ಕೇಳುವ ಅನೇಕರು ತಮ್ಮ ಮಾತಿನಿಂದ ದೇಹವನ್ನು ಅಶುದ್ಧಮಾಡಿಕೊಳ್ಳುವದಕ್ಕೂ, ಅನೇಕರನ್ನು ಪಾಪದಲ್ಲಿ ಕಟ್ಟಿಹಾಕುವದಕ್ಕೂ ಸೈತಾನನು ತಂತ್ರಮಾಡಿದ್ದಾನೆ. ಇವರು ದೊಡ್ಡ ದೊಡ್ಡ ಸಂಸ್ಥೆಗಳನ್ನು, ಇಟ್ಟುಕೊಂಡಿದ್ದಾರೆ. ಬಹುಜನರನ್ನು ತಮ್ಮ ವಶದಲ್ಲಿಕೊಂಡಿದ್ದಾರೆ. ಇವರು ಮೋಸದ ತ್ರಾಸುಳ್ಳ ಅನೇಕ ವ್ಯಾಪಾರಿಗಳೊಂದಿಗೂ, ಬಹು ದುಷ್ಟಜನರೊಂದಿಗೂ ಒಡನಾಟವಿಟ್ಟುಕೊಂಡಿರುವವರು. ಇಂತವರನ್ನು ಗುರಿಮಾಡಿಕೊಂಡು ಇವರ ಮೂಲಕ ವಂಚನಾ ಅಲೆಗಳನ್ನು ನಿನ್ನ ದೇಶದೊಳಕ್ಕೆ ತಂದು ದೀನರನ್ನು, ದಿಕ್ಕಿಲ್ಲದವರನ್ನು ವಂಚಿಸಲು ತಂತ್ರವನ್ನಿಟ್ಟುಕೊಂಡಿರುವ ಆ ದುಷ್ಟ ಆತ್ಮ ಅಬದ್ದೋನನೆಂದೂ, ಅಪೋಲ್ಲುವೋನನೆಂದೂ ಕರೆಯಲ್ಪಡುತ್ತದೆ. ಈ ದುಷ್ಟ ಆತ್ಮವೇ ಅಂತಿಕ್ರಿಸ್ತನ ಆತ್ಮ, ಇಗೋ ನಿನ್ನ ದೇಶದ ಮೇಲೆ ತನ್ನ ದೃಷ್ಟಿಯನ್ನಿಟ್ಟಿದೆ. ಅದನ್ನು ಗಧರಿಸಿ ಕಟ್ಟಿಹಾಕಿರಿ ಎಂದು ದೇವರು ನುಡಿಯುತ್ತಾನೆ. (ಪ್ರಕಟಿಸಲ್ಪಟ್ಟ ದಿನ: 20.03.2016 ರಾಮನಾಥಪುರಂ)

## ವಿವರಣೆ:

ದೇಶದಲ್ಲಿ ಉಜ್ಜೀವನ ಬರುವದಕ್ಕೂ ಮುಂಚಿತವಾಗಿ ಸೈತಾನನು ಅನೇಕ ವಿಧವಾದ ವಿರುದ್ಧಕ್ರಿಯೆಗಳನ್ನು ಉಂಟುಮಾಡಿ ಜನರನ್ನು ಗೊಂದಲಪಡಿಸುವಂತೆ ತಂತ್ರದ ಕಾರ್ಯಗಳನ್ನು ಮಾಡಲು ಹೊರಡುತ್ತಾನೆ. ಅಂತಿಕ್ರಿಸ್ತನ ಈ ಆತ್ಮ ಮೊದಲು ಕಾರ್ಯಮಾಡಲು ನಮ್ಮ ದೇಶವನ್ನು ಗುರಿಮಾಡಿಕೊಂಡಿದೆ. ಇದು ವಂಚನೆಯ ಅಲೆಗಳನ್ನು ದೇಶದಲ್ಲಿ ಉಂಟುಮಾಡಿ ದೀನ ದರಿದ್ರರನ್ನು ಗೊಂದಲಪಡಿಸುವಂತಹ ಉದ್ದೇಶವನ್ನು ಇಟ್ಟುಕೊಂಡಿದೆ. ಆದರಿಂದ ಅಂತಿಕ್ರಿಸ್ತನ ಈ ದುಷ್ಟ ಆತ್ಮವನ್ನು ಗದರಿಸಿ ಕಟ್ಟಿಹಾಕಿ, ಅವನ ತಂತ್ರಗಳಿಗೆ ವಿರುದ್ಧವಾಗಿ ನಮ್ಮ ಖಡ್ಗಗಳನ್ನು ಮೆಲೆತ್ತುವಂತೆ ದೇವರು ನಮಗೆ ಕಟ್ಟಳೆಯಿಟ್ಟಿದ್ದಾನೆ. ಇವುಗಳಿಗಾಗಿ ಬಿಡದೆ ಪ್ರಾರ್ಥಿಸೋಣ.

## ಪ್ರಾರ್ಥನಾ ಮನವಿ

01. ಉಜ್ಜೀವನಕ್ಕೆ ವಿರುದ್ಧವಾಗಿ ಎದ್ದು ಕಾರ್ಯಮಾಡಲು ದೇಶದ ಮೇಲೆ ಕಣ್ಣಿಟ್ಟಿರುವ ದುಷ್ಟಾತ್ಮವಾದ ಅಂತಿಕ್ರಿಸ್ತನ ಆತ್ಮವನ್ನು ಕಟ್ಟಿಹಾಕಲು ಪ್ರಾರ್ಥಿಸೋಣ. ಸೈತಾನನ ಮಹಿಮೆಯಲ್ಲಿ ತುಂಬಲ್ಪಟ್ಟಂತ ಸೇವಕರನ್ನು ಎಬ್ಬಿಸುವದಕ್ಕೂ, ಕಪಟವಚನದಿಂದಲೂ, ದೇವರಿಗೆ ವಿರುದ್ಧವಾದ ಕಾರ್ಯಗಳಿಂದಲೂ ಜನರನ್ನು ಗೊಂದಲಪಡಿಸುವಂತಹ ಅಂತಿಕ್ರಿಸ್ತನ ಆತ್ಮವನ್ನು ಕಟ್ಟಿಹಾಕಿ ಪ್ರಾರ್ಥಿಸಿರಿ.

02.ಸುಪ್ರಸಿದ್ಧ ಸೇವಕರನ್ನೂ, ಬಹುಜನರನ್ನೊಳಗೊಂಡಿರುವ ಸೇವಕರ ಮೇಲ ಕಣ್ಣಿಟ್ಟು, ಅವರನ್ನು ಉಪಯೋಗಿಸಿ ಅವರನ್ನು ಹಿಂಬಾಲಿಸುವವರ ದೇಹವನ್ನು ಅಶುದ್ಧಗೊಳಿಸಿ, ಅವರ ಹೃದಯದ ಆಲೋಚನೆಗಳಿಗೆ ವಿಷವನ್ನು ಸುರಿಯಲು ಸೈತಾನನು ಇಟ್ಟುಕೊಂಡಿರುವ ಪ್ರತಿಯೊಂದು ಉದ್ದೇಶಗಳು ಅಳಿದುಹೋಗುವಂತೆ ಪ್ರಾರ್ಥಿಸಿರಿ.

03. ದುಷ್ಟ ಕಾರ್ಪೋರೇಟ್ ವ್ಯಾಪಾರಿಗಳೊಂದಿಗೂ, ಅನೇಕ ದುಷ್ಟಜನರೊಂದಿಗೂ ಒಡನಾಟವಿರುವಂತವರ ಮೇಲೆ ಕಣ್ಣಿಟ್ಟು ಅವರ ಮೂಲಕ ವಂಚಿಸುವ ಅಲೆಗಳನ್ನು ನಿನ್ನ ದೇಶದಲ್ಲಿಯೇ ಉಂಟುಮಾಡಿ, ದೀನರನ್ನೂ, ದಿಕ್ಕಿಲ್ಲದವರನ್ನೂ ವಂಚಿಸುವದಕ್ಕಾಗಿ ಎದ್ದೇಳಲಿರುವ ಕೆಡುಕನಾದ ಅಪೋಲ್ಲುವೋನನೆಂಬ ಆತ್ಮವು ಕಟ್ಟಿಹಾಕಲ್ಪಡಲು ಪ್ರಾರ್ಥಿಸಿರಿ.

04. ದೇಶದಲ್ಲಿ ಕಾರ್ಯಮಾಡಲಿರುವ ಅಪೋಲ್ಲುವೋನ ಎಂಬ ವಂಚಿಸುವ ಅಂತಿಕ್ರಿಸ್ತನ ಆತ್ಮವನ್ನು ಕಟ್ಟಿಹಾಕಿ ಪ್ರಾರ್ಥಿಸುವ ಯುದ್ಧವೀರರುಗಳು, ಪ್ರಾರ್ಥಿಸುವ ಪ್ರಾರ್ಥನಾವೀರರುಗಳನ್ನು ದೇಶವಿಡಿ ಎದ್ದೇಳಲು ಪ್ರಾರ್ಥಿಸಿರಿ.

05. ವಂಚಿಸುವ ಈ ದುಷ್ಟ ಆತ್ಮದ ಕಾರ್ಯ, ನಮ್ಮ ಸಭೆಗಳನ್ನಾಗಲಿ, ಜನರನ್ನಾಗಲಿ ಅಶುದ್ಧಗೊಳಿಸಿಬಿಡದಂತೆ ನೀವು ತಿಳಿದಿರುವಂತ ಎಲ್ಲಾ ಸಭೆಗಳ ಸಂರಕ್ಷಣೆಗಾಗಿ ಅವುಗಳ ಹೆಸರು ಹೇಳಿ ಪ್ರಾರ್ಥಿಸಿರಿ.